

## ಮೇಲೆ ಹೋದಳೇನೊ...

ದೀನನಾಥ ಕಾಕಾ ನಮ್ಮ ನೆರೆಮನೆಯವರು. ತುಂಬಾ ಒಳ್ಳೆಯ ವ್ಯಕ್ತಿ. ಆದರೆ ಅವರ ಪತ್ನಿ ಜಗಳಗಂಟಿ. ಸದಾ ಸಿಡುಕುತ್ತ ಮನೆಯ ಶಾಂತಿಯನ್ನು ಕದಡುತ್ತಿದ್ದಳು. ಹೃದಯಾಘಾತದಿಂದ ಅವರು ತೀರಿಕೊಂಡರು. ದೀನನಾಥ ಕಾಕಾ ನೆರೆಮನೆಯವರೊಂದಿಗೆ ಎಲ್ಲಾ ಕಾರ್ಯಗಳನ್ನು ಮುಗಿಸಿ ಮನೆಗೆ ಬಂದರು. ಅಷ್ಟರಲ್ಲಿ ಜೋರು ಗುಡುಗು, ಸಿಡಿಲು, ಮಳೆ ಆರಂಭವಾಯಿತು. ದೀನನಾಥ ಕಾಕಾ ಅಂಗಳಕ್ಕೆ ಬಂದು ಆಕಾಶದತ್ತ ನೋಡುತ್ತ, 'ಮೇಲೆ ಹೋದಳೂಂತ ಕಾಣತ್ತೆ' ಎಂದು ಗುನುಗಿದರು.

**ಶೋಭಾ ಪ್ರಮೋದ್**



## ಕೈ ನೋಯಿಸಿಕೊಂಡೆ

ನಮ್ಮ ದೊಡ್ಡಮ್ಮನ ಮಗಳ ನಿಶ್ಚಿತಾರ್ಥ ಕಾರ್ಯಕ್ರಮ ಮೈಸೂರಿನಲ್ಲಿ ನೆರವೇರಿತ್ತು. ಕಾರ್ಯಕ್ರಮಕ್ಕೆ ನಮ್ಮ ಮಾವನವರೂ ಬಂದಿದ್ದರು. ನಿಶ್ಚಿತಾರ್ಥದ ನಂತರ ಗಂಡಿನವರು ಹೆಣ್ಣಿನವರ ಮನೆ ನೋಡಲು ದೊಡ್ಡಮ್ಮನ ಮನೆಗೆ ಬಂದಿದ್ದರು. ಕಾಫಿ–ತಿಂಡಿ–ಮಾತು ಮುಗಿದ ಮೇಲೆ ಗಂಡಿನ ಕಡೆಯವರು ಹೊರಟು ನಿಂತರು. ನಾವೆಲ್ಲರೂ ಅವರನ್ನು ಬೀಳ್ಕೊಡಲು ಹೊರಗೆ ಹೋದೆವು. ಬಸ್ಸಿನಲ್ಲಿ ಹತ್ತಿ ಕುಳಿತ ಮೇಲೂ ವರ ಮತ್ತೆ ಮತ್ತೆ ನಮ್ಮ ಮಾವನವರ ಕಡೆ ಕೈ ಬೀಸಿ ಟಾಟಾ ಮಾಡುತ್ತಲೇ ಇದ್ದ. ಮಾವನವರೂ ಸಹ ಬಸ್ಸು ಕಣ್ಮರೆಯಾಗುವವರೆಗೂ ಖುಷಿಯಿಂದ ಕೈ ಬೀಸುತ್ತಲೇ ಇದ್ದರು. ನಂತರ ಹಿಂತಿರುಗಿ ನೋಡಿದರೆ ಮಾವನ ಹಿಂದೆ ವಧು ನಿಂತಿದ್ದಳು. 'ಅಯ್ಯೊ ನನ್ನ ಹಿಂದೆ ಮದುಮಗಳು ನಿಂತಿದ್ದಾಳೆ ಅಂತ ನನಗೆ ಗೊತ್ತೇ ಇರಲಿಲ್ಲ. ಹುಡುಗ ನನಗೇ ಟಾಟಾ ಮಾಡುತ್ತಿದ್ದಾನೆ ಅಂದುಕೊಂಡು ಕೈ ಬೀಸಿ ಬೀಸಿ ಸುಮ್ಮನೇ ಕೈ ನೋಯಿಸಿಕೊಂಡೆ' ಎಂದರು. ನಮಗೆಲ್ಲ ನಕ್ಕು ಸಾಕಾಯ್ತು.

**ಸಿಂಧು ಬಿ.ಎಸ್.**

ಚಿತ್ರಗಳು: ಗಣೇಶ ಆಚಾರ್ಯ